# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No. 1 | Issue : 268 | Pages .02 | Date : 12.09.2025 FRIDAY RNI NO.KARKAN/2024/89601 Kannada Daily

ಸಂಪುಟ : 01 – ಸಂಚಿಕೆ : 268 – ಪುಟಗಳು : 02 12.09.2025 ಶುಕ್ರವಾರ Ph : 8762954248 ದರ : ₹1


# ಅರಣ್ಯ ರಕ್ಷಣೆಗಾಗಿ ಪ್ರಾಣ ತ್ಯಾಗ ಮಾಡಿದವರ ಸ್ಮರಿಸಿ

## ಹಾಸನದಲ್ಲಿ ಅರಣ್ಯ ಹುತಾತ್ಮರ ದಿನ । ಭಾವುಕ ಗೌರವ ನಮನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪರಿಸರ ಸಂರಕ್ಷಣೆಗಾಗಿ ಪ್ರಾಣದ ಹಂಗು ತೊರೆದು ಕೆಲಸ ಮಾಡಿರುವವರನ್ನು ಸರಿಸುವುದು ನಮೆಲ್ಲರ ಜವಾಬ್ದಾರಿ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧಶೆ ಹೇಮಾವತಿ ಹೇಳಿದರು.






ಅರಣ್ಯ ಇಲಾಖೆ ವತಿಯಿಂದ ನಗರದ ಅರಣ್ಯ ಭವನದಲ್ಲಿ ಗುರುವಾರ ಹಮಿಕೊಂಡಿದ್ದ ರಾಷ್ಟ್ರೀಯ ಅರಣ್ಯ ಹುತಾತರ ದಿನಾಚರಣೆಯಲ್ಲಿ ಹುತಾತರ ಸಾರಕಕ್ಕೆ ಗೌರವ ಸಲ್ಲಿಸಿ ಮಾತನಾಡಿ, ಕಾಡುಗಳ್ಳ ವೀರಪ್ಪನ್‌ನಿಂದ ಡಿಸಿಎಫ್ ಪಿ. ಶ್ರೀನಿವಾಸ್ ಅವರು ಹತ್ಯೆಯಾದ ಬಳಿಕ ಜನರಿಗೆ ಅರಣ್ಯ ಇಲಾಖೆ ನೌಕರರು ಅನುಭವಿಸುವ ಕಷ್ಟ ನಷ್ಟಗಳು ಅರಿವಿಗೆ ಬಂದವು. ಕಾಡು ಪ್ರಾಣಿಗಳು ಹಾಗು ಅರಣ್ಯ ಸಂರಕ್ಷಣೆಗಾಗಿ ಸಿಬ್ಬಂದಿ ಮಾಡುವ ಕೆಲಸಕ್ಕೆ ಬೆಲೆ ಕಟ್ಟಲಾಗುವುದಿಲ್ಲವೆಂದು ಅರಣ್ಯ ಸಂರಕ್ಷಣೆ ಮನುಷ್ಯನ ಉಳಿಯುವಿಕೆಯ ಭಾಗ. ಮೊದಲೆಲ್ಲಾ ಸಕಾಲದಲ್ಲಿ ಮಳೆ ಆಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ವೈಯುಕ್ತಿಕ ಲಾಭಕ್ಕಾಗಿ ಪರಿಸರ ಹಾಳು ಮಾಡುತ್ತಿದ್ದೇವೆ. ಕಾಡು ಪ್ರಾಣಿಗಳು ನಾಡಿಗೆ ಬರುವಂತೆ ನಾವೇ ಮಾಡಿದ್ದೇವೆ. ಈ ಲೋಪದಲ್ಲಿ ಅಭಿವೃದ್ಧಿ ಜೊತೆಗೆ ವೈಯಕ್ತಿಕ ಹಿತಾಸಕ್ತಿಯು ಅಡಗಿದೆ. ಅರಣ್ಯ ಸಂರಕ್ಷಣೆಗಾಗಿ ಜೀವದ ಹಂಗು ತೊರೆದು ಕುಟುಂಬವನ್ನು ಮರೆತು ಮಡಿದ ಸಿಬ್ಬಂದಿಗೆ ಗೌರವ ಸಲ್ಲಿಸಬೇಕು ಎಂದು ಹೇಳಿದರು.

2013ರಿಂದ ರಾಷ್ಟ್ರದಲ್ಲಿ ಹುತಾತ ಅರಣ್ಯ ಹುತಾತರ ದಿನಾಚರಣೆ ಜಾರಿಗೆ ಬಂದಿದೆ. ಬೇರೆಯವರ ಉತ್ತಮ ಬದುಕಿಗಾಗಿ ತಮ ಪ್ರಾಣ ತ್ಯಜಿಸಿದ ಮಹನೀಯರಿಗೆ ಗೌರವಿಸೋಣ. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಕಾನೂನು ಎಷ್ಟೇ ಬಿಗಿಯಾಗಿದ್ದರೂ ಅರಣ್ಯ ನಾಶ, ಒತ್ತುವರಿ ನಡೆಯುತ್ತಲೇ ಇದೆ. ಈ ಬಗ್ಗೆ ಜನರಿಗೆ ತಿಳಿವಳಿಕೆ ಮೂಡಿಸುವ ಕಾರ್ಯಕ್ರಮಗಳು ಹೆಚ್ಚಬೇಕು ಎಂದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಜೀವವನ್ನು ತೊರೆದು ಅರಣ್ಯಕ್ಕಾಗಿ ಪ್ರಾಣ ಬಿಟ್ಟವರ ಬಗ್ಗೆ ಹೆಮೆಯಾಗುತ್ತದೆ. ಪರಿಸರ ಸಮತೋಲನಕ್ಕೆ ಅರಣ್ಯ ಅತ್ಯವಶ್ಯ. ಕಾಡು ಪ್ರಾಣಿಗಳ ಉಪಟಳ ನಿಯಂತ್ರಣ, ಅರಣ್ಯ ಸಂಪತ್ತು ನಾಶದ ವಿರುದ್ಧ ಕಾರ್ಯಾಚರಣೆಯಲ್ಲಿ ಸಿಬ್ಬಂದಿ ವಹಿಸುವ ಪಾತ್ರ ಮೆಚ್ಚುವಂತಹುದು. ಮನುಷ್ಯರು ಮತ್ತು ಕಾಡು ಪ್ರಾಣಿಗಳ ನಡುವೆ ಸೇತುವೆಯಾಗಿ ಸಿಬ್ಬಂದಿ ಕೆಲಸ ಮಾಡುತ್ತಾರೆ. ಇಲಾಖೆಯ ಕೆಳ ಹಂತದ ಸಿಬ್ಬಂದಿ ಕೆಲಸ ಕಷ್ಟಕರವಾಗಿದ್ದು ಅವರಿಗೆ ಗೌರವಿಸಲೇಬೇಕು ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಮಾತನಾಡಿ, ಅರಣ್ಯ ಇಲಾಖೆಯ ಹೊರ ಗುತ್ತಿಗೆ ನೌಕರರು ಕರ್ತವ್ಯ ವೇಳೆ ಮೃತಪಟ್ಟರೆ ಅವರ ಕುಟುಂಬಸ್ಥ–ರಿಗೆ ಅನುಕಂಪದ ಆಧಾ–ರದ ಮೇಲೆ ಕೆಲಸ ಕೊಡಲು ಆಗುತ್ತಿಲ್ಲ.

ಈ ನಿಟ್ಟಿನಲ್ಲಿ ಬದಲಾವಣೆ ತರಬೇಕು. ಸರ್ಕಾರ ಆ ನಿಟ್ಟಿನಲ್ಲಿ ಯೋಚಿಸಬೇಕು ಎಂದು ಅಭಿಪ್ರಾಯಪಟ್ಟರು.

ಅರಣ್ಯ ಸಂರಕ್ಷಣಾಧಿಕಾರಿ ಏಡುಕುಂಡಲು ಮಾತನಾಡಿ, 1730ರಲ್ಲಿ ರಾಜಸ್ಥಾನದ ಖೇಜ್ರಿ ಗ್ರಾಮದಲ್ಲಿ ಮಹಾರಾಜ ಅಭಯ್ ಸಿಂಗ್ ಅವರ ಆದೇಶದಂತೆ ಖೇಜ್ರಿ ಮರಗಳನ್ನು ಕಡಿಯಲು ಮುಂದಾದಾಗ ಬಿಷ್ಣೋಯ್ ಸಮುದಾಯದ 363 ಜನರು ಮರಗಳನ್ನು ರಕ್ಷಿಸಲು ತಮ ಪ್ರಾಣ ತ್ಯಾಗ ಮಾಡಿದರು. ಅವರ ದಿನವನ್ನು ಕೇಂದ್ರ ಸರ್ಕಾರ ಹುತಾತರ ದಿನವಾಗಿ ಘೋಷಿಸಿದೆ ಎಂದರು.

ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಮಡಿದ ಸಿಬ್ಬಂದಿಗೆ ಗೌರವ ಸೂಚಿಸಲಾಯಿತು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜಿತಾ, ಡಿಸಿ–ಎಫ್ ಸೌರಭ್ ಕುಮಾರ್, ಅಧಿಕಾರಿಗಳಾದ ಕಾವ್ಯಶ್ರೀ, ಶಾಂತಕುಮಾರ್, ಮೋಹನ್ ಕುಮಾರ್ ಇತರರಿದ್ದರು.

# ಬೂವನಹಳ್ಳಿಯಲ್ಲಿ ಶಾಸಕ ಸ್ವರೂಪ್ ಮ್ಯಾರಾಥಾನ್ ಮೀಟಿಂಗ್

## ಗ್ರಾಮ ಅಭಿವೃದ್ಧಿ ಸಂಕಲ್ಪ । ಸಾರ್ವಜನಿಕರಿಂದ ಅಹವಾಲು ಸ್ವೀಕಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿರುವ ಬೂವನಹಳ್ಳಿ ಗ್ರಾಮದಲ್ಲಿ ಶಾಸಕ ಹೆಚ್.ಪಿ. ಸ್ವರೂಪ್ ಎರಡು ದಿನಗಳಿಂದ ಮ್ಯಾರಾಥಾನ್ ಮೀಟಿಂಗ್ ನಡೆಸುವ ಮೂಲಕ ಗ್ರಾಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದ್ದಾರೆ.



ರಸ್ತೆ, ಕುಡಿಯುವ ನೀರು, ಮೂಲಸೌಕರ್ಯ ಕೊರತೆಯಿಂದ ಜನ ಜೀವನಕ್ಕೆ ತೊಂದರೆ ಯಾಗಬಾರದು. ಸಂಬಂಧಪಟ್ಟ ಇಲಾಖೆಯವರು ಶೀಘ್ರ ಸಮಸ್ಯೆಗೆ ಪರಿಹಾರ ಕ್ರಮ ಕೈಗೊಳ್ಳಬೇಕು. ಅಭಿವೃದ್ಧಿ ಕಾಮಗಾರಿಗೆ ಅನಗತ್ಯ ವಿಳಂಬ ಆಗದಂತೆ ನಿಯಮಾವಳಿ ಪಾಲಿಸಿ ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ಮುಖ್ಯವಾಗಿ ರಸ್ತೆ ಕಾಮಗಾ–ರಿಗೆ ಪ್ರಾಮುಖ್ಯತೆ ನೀಡಬೇಕು. ಶುದ್ಧ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ತುರ್ತು ಯೋಜನೆ ಸಿದ್ಧಪಡಿಸಬೇಕೆಂದು ಹೇಳಿದರು.

ಗ್ರಾಮದಲ್ಲಿ ಸಶಾನ ಜಾಗವಿಲ್ಲದೆ ಅಂತ್ಯಕ್ರಿಯೆಗೆ ಭಾರೀ ಸಮಸ್ಯೆಯಾಗುತ್ತಿದೆ ಎಂದು ಗ್ರಾಮಸ್ಥರು ಶಾಸಕರ ಗಮನಕ್ಕೆ ತಂದರು. ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಹೆಚ್.ಪಿ. ಸ್ವರೂಪ್ ಅವರು, ಹುಡಾ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ಸೂಚಿಸಿದರು. ಅಂತ್ಯಕ್ರಿಯೆಗೆಯಾವ ತೊಂದರೆ ಆಗದಂತೆ ಸೂಕ್ತ ಕ್ರಮ ಕೈ ಗೊಳ್ಳುವುದಾಗಿ ಭರವಸೆ ನೀಡಿದರು.

ಸ್ಮಶಾನ ಜಾಗದ ಗಡಿ ನಿಗದಿ, ರಸ್ತೆ ಸಂಪರ್ಕ, ಶೌಚಾಲಯ, ಕುಡಿಯುವ ನೀರು ಹಾಗೂ ಬೆಳಕು ವ್ಯವಸ್ಥೆ ಸೇರಿ ಮೂಲ ಸೌಕರ್ಯ ಕಲ್ಪಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸ್ಮಶಾನಕ್ಕಾಗಿ ಮೀಸಲಿರುವ 3 ಎಕರೆ 18 ಗುಂಟೆ ಜಾಗದ ಸರ್ವೆ ಮುಗಿಸಿ ಪಾಲಿಕೆಗೆ ಹಸ್ತಾಂತರಿಸಿ, ಕಾಂಪೌಂಡ್ ಇಲ್ಲವೇ ತಂತಿ ಬೇಲಿ ಹಾಕಬೇಕೆಂದು ಅಧಿಕಾ–ರಿಗಳಿಗೆ ಸಲಹೆ ನೀಡಿದರು.

ಬೂವನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿ, ನಿಗದಿತ ಗಡುವಿನೊಳಗೆ ಕೆಲಸ ಮುಗಿಸುವಂತೆ ಗುತ್ತಿಗೆದಾರರು ಹಾಗು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕೆರೆಗಳು ಗ್ರಾಮೀಣ ಜನರ ಜೀವನಾಧಾರ. ಅವುಗಳ ಸಂರಕ್ಷಣೆ ಹಾಗು ಅಭಿವೃದ್ಧಿ ನಮ ಜವಾಬ್ದಾರಿ. ಕೆರೆ ತೂಡಕು ತೆರವು, ಬಂಡೆ ಕಟ್ಟು ಬಲ, ನೀರಿನ ಹರಿವು ಸುಗಮಗೊಳಿಸುವುದು ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಬೇಕೆಂದು ಹೇಳಿದರು.

ಮಹಾನಗರ ಪಾಲಿಕೆ ಆಯುಕ್ತ ಆರ್. ಕೃಷ್ಣಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಸ್ವಾಮಿಗೌಡ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಜಯರಾಂ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಆರ್. ಬೊಮ್ಮೇಗೌಡ, ಮುಖಂಡರಾದ ತುಳಸಿರಾಂ, ಮಲ್ಲೇಶ್, ಕರಿಯಯ್ಯ, ಲಕ್ಷ್ಮಣ್, ಸಂಕೇನಹಳ್ಳಿ ವೇಣು, ಸೋಮೇಶ್ ಇತರರಿದ್ದರು.

# ಮದ್ಯದ ಅಮಲು: ಪತ್ನಿ ಕೊಂದ ಪತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆಯ ಪಿಳ್ಳೇಶ್ವರ ಬಡಾವಣೆಯಲ್ಲಿ ವ್ಯಕ್ತಿಯೊಬ್ಬ ಕುಡಿದ ಅಮಲಿನಲ್ಲಿ ಚಾಕುವಿನಿಂದ ಎದೆಗೆ ಇರಿದು ಹೆಂಡತಿಯನ್ನು ಕೊಲೆಗೈದಿದ್ದಾನೆ.

ರೇಖಾ (38) ಮೃತರು. ಪತಿ ರಘು (40) ಕೊಲೆ ಆರೋಪಿ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಹೊನ್ನದೇವಿಹಳ್ಳಿ ಗ್ರಾಮದ ರೇಖಾ ಅವರನ್ನು 18 ವರ್ಷಗಳ ಹಿಂದೆ ಸಕಲೇಶಪುರ ತಾಲ್ಲೂಕು ಹಾನುಬಾಳ್ ಗ್ರಾಮದ ರಘು ಜೊತೆಗೆ ವಿವಾಹ ಮಾಡಿಕೊಡಲಾಗಿತ್ತು.

ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ರಘು ತನ್ನ ಹುಟ್ಟೂ–ರಿನಲ್ಲಿ ಇರದೆ ಎರಡು ವರ್ಷಗಳ ಹಿಂದೆ ಹಿರೀಸಾವೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಕುಟುಂಬ ಸಮೇತ ವಾಸವಿದ್ದ. ಕೂಲಿ ಕೆಲಸ ಮಾಡಿಕೊಂಡಿದ್ದ ಆತ ವಿಪರೀತ ಮದ್ಯ ವ್ಯಸನಿಯಾಗಿದ್ದ.

ಬುಧವಾರ ಮಧ್ಯಾಹ್ನ ಹೆಂಡತಿ ರೇಖಾ ಜೊತೆಗೆ ಜಗಳ ಮಾಡಿದ್ದು ಆವೇಶದಲ್ಲಿ ಚಾಕುವಿನಿಂದ ಕುತ್ತಿಗೆಗೆ ಇರಿದಿದ್ದಾನೆ. ಪಕ್ಕದ ಮನೆಯಲ್ಲಿ ಟ್ಯೂಷನ್‌ಗೆಂದು ತೆರಳಿದ್ದ ಹಿರಿಯ ಪುತ್ರ ಜೋರು ಶಬ್ದ ಕೇಳಿದ್ದಕ್ಕೆ ಓಡಿ ಬಂದಿದ್ದು ಅವರ ಅಮ್ಮ ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡಿದೆ. ಕೈಯಲ್ಲಿ ಚಾಕು ಹಿಡಿದು ನಿಂತಿದ್ದ ರಘು ಮಗ ಬರುತ್ತಿದ್ದಂತೆ ಅಲ್ಲಿಂದ ಕಾಲ್ಕಿತ್ತಿದ್ದಾನೆ. ಸ್ಥಳೀಯರು ದೌಡಾಯಿಸಿ ರೇಖಾ ಅವರನ್ನು ಹಿರೀಸಾವೆ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ಹೆಚ್ಚಿನ ಚಿಕಿತ್ಸೆಗಾಗಿ ಎ.ಸಿ. ಗಿರಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೃಷಿ ವಿದ್ಯಾರ್ಥಿಗಳಿಂದ ಮಾಹಿತಿ ಕೇಂದ್ರ: ಉದ್ಘಾಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾರೆಕೆರೆ ಕೃಷಿ ಕಾಲೇಜಿನ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ತಾಲ್ಲೂಕಿನ ಕೆ. ಆಲದಹಳ್ಳಿಯಲ್ಲಿ ಹಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಕೃಷಿ ಮಾಹಿತಿ ಕೇಂದ್ರ ಪ್ರಾರಂಭಿಸಿದ್ದಾರೆ.



ಕೃಷಿ ಮಾಹಿತಿ ಕೇಂದ್ರ ಕೇಂದ್ರ ಗ್ರಾಮೀಣ ಜೀವನವನ್ನು ಪರಿಚಯಿಸುವುದರ ಜೊತೆಗೆ ವ್ಯವಸಾಯಕ್ಕೆ ಪೂರಕವಾಗಿದೆ. ಹಳ್ಳಿಯ ಸಂಪನೂಲ ನಕ್ಷೆ, ಗ್ರಾಮ ಚಿತ್ರಣ, ನೆನಪಿನ ವೃಕ್ಷ, ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಬೀಜ ಉತ್ಪದನಾ ತತ್ವಗಳು, ಬೀಜೋಪಚಾರ ಅದರ ಪ್ರಯೋಜನ, ರೈತರು ಬಿತ್ತನೆ ಬೀಜ ಖರೀದಿಸುವಾಗ ಗಮನದಲ್ಲಿಡಬೇಕಾದ ಅಂಶ, ಬೀಜದಿಂದ ಸಸಿ, ಉತ್ತಮ ಬೀಜದ ಗುಣಲಕ್ಷಣ, ಬೀಜ ಒಣಗಿಸುವಿಕೆ ವಿಧಾನ ಹೀಗೆ ಎಲ್ಲಾ ಮಾಹಿತಿಯನ್ನು ಒಳಗೊಂಡಿದೆ. ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ, ತೋಟಗಾರಿಕಾ ವಿಭಾಗದಲ್ಲಿ ಶೂನ್ಯ ಶಕ್ತಿ ಘಟಕ ಮತ್ತು ಅದರ ಉಪಯೋಗ, ಕೃಷಿ ಯಂತ್ರಧಾರೆ, ತೋಟಗಾರಿಕೆ, ಎರೆಗೊಬ್ಬರ ಮಾಡುವ ವಿಧಾನ, ಸಾವಯವ ಕೃಷಿ, ಗೊಬ್ಬರದ ವಿಧಗಳು, ಬೆಳೆ ಪರಿವರ್ತನೆ, ನವ ಧಾನ್ಯಗಳ ಬಗ್ಗೆ ಮಾಹಿತಿ, ಹೊಲದಲ್ಲಿ ಬಳಸುವ ಸಲಕರಣೆಗಳು, ವಿವಿಧ ಬಗೆಯ ಹೊದಿಕೆ, ಅರಣ್ಯ ಕೃಷಿ ಬಗ್ಗೆಯೂ ಮಾಹಿತಿ ನೀಡಲಾಗುತ್ತಿದೆ. ವಿಭಾಗದಲ್ಲಿ ಕೃಷಿ ಅರಣ್ಯ ಪ್ರೋತ್ಸಾಹ ಧನ ಹಾಗೂ ಕೃಷಿ ಅರಣ್ಯದ ಉಪಯೋಗಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

ಜೇನು ಕೃಷಿ ವಿಭಾಗದಲ್ಲಿ ಅದರ ಪರಿಕರಗಳು ಹಾಗು ಜೇನು ಪೆಟ್ಟಿಗೆಯ ಬಗ್ಗೆ ಮಾಹಿತಿ ನೀಡಲಾಯಿತು. ರೇಷ್ಮೆ ಕೃಷಿ ವಿಭಾಗದಲ್ಲಿ ರೇಷ್ಮೆ ಹುಳುವಿನ ಪಾಲನೆ, ರೇಷ್ಮೆ ಹುಳು ಜೀವನ ಚಕ್ರ, ಪಶು ಸಂಗೋಪನೆ ಬಗ್ಗೆ ವಿದ್ಯಾರ್ಥಿಗಳು ರೈತರಿಗೆ ಅರಿವು ಮೂಡಿಸಿದರು.

ಮಾಹಿತಿ ಕೇಂದ್ರವನ್ನು ಮಹಾವಿದ್ಯಾಲಯ ಡೀನ್ (ಕೃಷಿ) ಡಾ. ಕೆ.ಎನ್. ಮುನಿಸ್ವಾಮಿಗೌಡ ಉದ್ಘಾಟಿಸಿದರು. ಸಹಾಯಕ ಪ್ರಾಧ್ಯಾಪಕಿ ಡಾ. ಜಿ.ಎಸ್. ಶಶಿಕಲಾ, ಕೃಷಿ ವಿಸ್ತರಣಾ ವಿಭಾಗ ಸಹಾಯಕ ಪ್ರಾಧ್ಯಾಪಕರು ಡಾ. ಶಿವಬಸಪ್ಪ ಕಂದಕೂರ್, ಕೃಷಿ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಎ.ಎಸ್. ಶಶಿಕಿರಣ್, ಕೃಷಿ ಅರ್ಥಶಾಸ್ತ್ರ ವಿಭಾಗದ ಡಾ. ವಿನೋದಾ ಶಂಕರ ನಾಯ್ಕ್, ಡಾ.ಹೆಚ್. ಮಂಜುನಾಥ ಭಾಗವಹಿಸಿದ್ದರು.

# ಬಾಳ್ಳುಪೇಟೆ ಹಾಲು ಉತ್ಪಾದಕರ ಸಂಘದ ಸಭೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲೂಕಿನ ಬಾಳ್ಳುಪೇಟೆ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಸಭೆ ಗುರುವಾರ ಸಂಘದ ಅಧ್ಯಕ್ಷ ಬಿ.ಬಿ. ಲೋಕೇಶ್ ಅಧ್ಯಕ್ಷತೆಯಲ್ಲಿ ನೆರವೇರಿತು.



ಈ ವೇಳೆ ಮಾತನಾಡಿದ ಅವರು, ಹೈನುಗಾರರು ಸಂಘಕ್ಕೆ ಗುಣಮಟ್ಟದ ಹಾಲು ನೀಡುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು. ಸಂಘವು 3 ಲಕ್ಷ ರೂ. ಲಾಭದಲ್ಲಿದೆ. ಅಲ್ಲದೆ ಹಾಲು ಒಕ್ಕೂಟದ ಸೌಲಭ್ಯಗಳ ಸದುಪಯೋಗ ಪಡೆಯಬೇಕು. 1,23,494 ರೂ. ಲಾಭಾಂಶ ಇದ್ದು ಸಂಘದ ಅಭಿವೃದ್ಧಿ ಕೆಲಸಗಳ ಬಳಕೆಗೆ ಸದಸ್ಯರ ಒಪ್ಪಿಗೆ ಪಡೆಯಲಾಗಿದೆ. ಸಂಘದ ಕಟ್ಟಡ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಪಿ.ಎಲ್. ನಿಂಗರಾಜು ಮಾತನಾಡಿ, ಬಾಳ್ಳುಪೇಟೆ ಉತ್ಪಾದಕರ ಸಂಘ ಉನ್ನತ ಮಟ್ಟಕ್ಕೆ ಬೆಳೆಯಲು ಅಧ್ಯಕ್ಷರು, ನಿರ್ದೇಶಕರು ಹಾಗೂ ಸದಸ್ಯರ ಬದ್ಧತೆ ಕಾರಣವಾಗಿದೆ. ಒಕ್ಕೂಟದಿಂದ ದೊರೆಯುವ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸುವ ಕೆಲಸವನ್ನು ಜಿಲ್ಲಾ ಸಂಘದಿಂದ ಮಾಡಲಾಗುವುದು. ಸಂಘವು ಮತ್ತಷ್ಟು ಎತ್ತರಕ್ಕೆ ಬೆಳೆಯಬೇಕೆಂದರೆ ದಾನಿಗಳು ಹಾಗು ಸರ್ಕಾರದ ಸಹಾಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಇಲ್ಲಿ ಸಂಗ್ರಹವಾಗುವ ಹಾಲು ಅಮೇರಿಕಾದಂತಹ ದೇಶಗಳಿಗೆ ಸರಬರಾಜು ಆಗುತ್ತದೆ ಎನ್ನುವುದು ಹೆಮೆಯ ವಿಷಯ. ಮುಂದಿನ ದಿನಗಳಲ್ಲಿ ನಮ ದೇಶ ಹೈನುಗಾರಿಕೆ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತದೆಂದು ವಿಶ್ವಾಸ ವ್ಯಕ್ತಪಡಿಸಿದರು.

ಪಶುವೈದ್ಯಾಧಿಕಾರಿ ನಿತ್ಯಾನಂದ ಮಾತನಾಡಿ, ಪಶುಗಳಿಗೆ ತಪ್ಪದೇ ವ್ಯಾಕ್ಸಿನ್ ಕೊಡಿಸಬೇಕು. ಹಸು ಆರೋಗ್ಯವಾಗಿದ್ದರೆ ಮಾತ್ರ ಶುದ್ಧ ಹಾಲು ದೊರೆಯಲು ಸಾಧ್ಯ. ಕೊಟ್ಟಿಗೆಯನ್ನುದಿನನಿತ್ಯ ಸ್ವಚ್ಛವಾಗಿಟ್ಟುಕೊಳ್ಳುವುದ–ರಿಂದ ಹಸುಗಳಿಗೆ ತಗುಲುವ ರೋಗಗಳಿಂದ ದೂರವಿ–ರಿಸಬಹುದು ಎಂದು ತಿಳಿಸಿದರು.

ಹೆಚ್ಚು ಹಾಲು ಉತ್ಪಾದಕರಾದ ಅಬ್ಬನ ಸಂಪತ್, ವಿಕ್ರಂ ಸಕ್ಲಾಲ್, ಮೋಹನ್ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಸಂಘದ ನಿರ್ದೇಶಕರಾದ ಎಂ.ಬಿ. ನಾಗೇಶ್, ಎಂ.ಎಸ್. ಧರ್ಮ ಪ್ರಕಾಶ್, ಎಂ.ಎಂ ಸತ್ಯ ಪ್ರಕಾಶ್, ಆರ್. ಆನಂದಮೂರ್ತಿ, ಬಿ.ಹೆಚ್. ಶಂಭುಲಿಂಗ, ವನಿತಾ, ವೀಣಾ, ದೃಶ್ಯಮಣಿ, ಅಣ್ಣಪ್ಪ, ನಿವೃತ್ತ ಶಿಕ್ಷಕ ದಿವಾಕರ್, ಬೆಳಗಾರರ ಸಂಘದ ಮಾಜಿ ಅಧ್ಯಕ್ಷ ಬಿ.ಎನ್. ಬಸವಣ್ಣ, ಗ್ರಾ.ಪಂ.ಸದಸ್ಯ ಸಂಜು, ಸಂಘದ ಕಾರ್ಯದರ್ಶಿ ಎಂ.ಆರ್. ಜಯಪ್ರಕಾಶ್ ಮತ್ತಿತರರಿದ್ದರು.

# ಹದಿಹರೆಯದ ಆಕರ್ಷಣೆಗೆ ಬಲಿಯಾಗಬೇಡಿ: ದಾಕ್ಷಾಯಿಣಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹದಿಹರೆಯದ ವಯಸ್ಸಿನಲ್ಲಿ ವಿದ್ಯಾರ್ಥಿಗಳು ಪ್ರೀತಿ, ಮೊಬೈಲ್ ಬಳಕೆ ಹಾಗು ದುಶ್ಚಟಕ್ಕೆ ದಾಸರಾಗದೆ ವ್ಯಾಸಂಗದ ಮೂಲಕ ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಸಲಹೆ ನೀಡಿದರು.



ನಗರದ ವಾಣಿವಿಲಾಸ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ಹಾಗೂ ಕಾಲೇಜು ವತಿಯಿಂದ ನಡೆದ ವಿಶ್ವ ಆತಹತ್ಯೆ ತಡೆ ದಿನದ ಕಾನೂನು ಅರಿವು–ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಈ ವಯಸ್ಸಿನಲ್ಲಿ ಆಕರ್ಷಣೆಗೆ ಒಳಗಾಗುವುದು ಸಹಜ. ಅದು ಜೀವನವನ್ನು ಹಾಳು ಮಾಡುವ ಮಾರ್ಗವಾಗಬಾರದು. ಕೆಟ್ಟ ವಿಚಾರಗಳ ಕಡೆ ಮನಸ್ಸು ಕೊಡದೆ ಉತ್ತಮ ಯೋಚನೆ ಮಾಡಬೇಕು. ಭವಿಷ್ಯದ ಬಗ್ಗೆ ಗಂಭೀರವಾಗಿ ಆಲೋಚಿಸಿ ಒಳ್ಳೆಯ ಪ್ರಜೆಯಾಗಿ ಬೆಳೆಯಬೇಕು ಎಂದರು.ಎಸ್–ಎಸ್‌ಎಲ್‌ಸಿ ಅಥ ವಾ ಪಿಯುಸಿ ಪರೀಕ್ಷೆ ಗಳಲ್ಲಿ ಅನುತ್ತೀರ್ಣರಾದ ಮಾತ್ರಕ್ಕೆ ಆತಹತ್ಯೆಗೆ ಶರಣಾಗುವ ಮನಸ್ಥಿತಿಯ ವಿದ್ಯಾರ್ಥಿಗಳಿದ್ದಾರೆ. ಅದಕ್ಕಿಂತ ಜೀವನದ ಪರೀಕ್ಷೆ ಮುಖ್ಯ ಎಂಬುದನ್ನು ಅರಿಯಬೇಕು. ಒಂದು ಬಾರಿ ಅನುತ್ತೀರ್ಣರಾದರೆ ಮತ್ತೊಂದು ಬಾರಿ ಬರೆಯುವ ಅವಕಾಶ ಸಿಗುತ್ತದೆ. ಆದರೆ ಜೀವವನ್ನೇ ತ್ಯಜಿಸಿದರೆ ಅದಕ್ಕೆ ಪರಿಹಾರವಿಲ್ಲ. ವಿದ್ಯಾರ್ಥಿಗಳು ಆತ್ಮಸ್ಥೈರ್ಯದಿಂದ ಇರಬೇಕು ಎಂದು ತಿಳಿಸಿದರು.

ಪೋಕ್ಸೋ ಕಾಯ್ದೆ ಬಗ್ಗೆ ವಿದ್ಯಾರ್ಥಿಗಳು ಅರಿವು ಹೊಂದಬೇಕು. ಹದಿಹರೆಯದ ವಯಸ್ಸಿನಲ್ಲಿ ತಪ್ಪು ಮಾಡುವ ಸಾಧ್ಯತೆಗಳು ಹೆಚ್ಚಿರುತ್ತದೆ. ಅದ–ರಿಂದ ಅನುಭವಿಸುವ ಶಿಕ್ಷೆ ಘೋರವಾಗಿರುತ್ತದೆ. ಕಾನೂನಿನ ಮುಂದೆ ಎಲ್ಲರೂ ಒಂದೆ ಯಾಗಿರುವುದರಿಂದ ಪ್ರಮಾದ ಆಗದಂತೆ ಎಚ್ಚರ ವಹಿಸಬೇಕು ಎಂದರು.

ವಾಣಿವಿಲಾಸ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಮಲ್ಲಿಗೆಮ, ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ. ನಾಗೇಶ್ ಆರಾಧ್ಯ, ಉಪನ್ಯಾಸಕ ಆರ್. ರಂಗರಾಜು ಇತರರಿದ್ದರು.

# ವಸತಿ ಯೋಜನೆ ಅಕ್ರಮ: ಲೋಕಾಯುಕ್ತಕ್ಕೆ ದೂರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ (ಪಿಎಂ–ಎವೈ) ಯಡಿ ಅಕ್ರಮ ನಡೆದಿರುವ ಬಗ್ಗೆ ತನಿಖೆಗೆ ಆಗ್ರಹಿಸಿ ಎಎಪಿ ಪಕ್ಷ ದಿಂದ ಲೋಕಾಯುಕ್ತಕ್ಕೆ ದೂರು ದಾಖಲಿಸಲಾಯಿತು.



ಎಎಪಿ ರಾಜ್ಯ ಉಪಾಧ್ಯಕ್ಷ ಎ.ಟಿ.ಅಗಿಲೆ ಯೋಗೇಶ್, ಜಿಲ್ಲಾಧ್ಯಕ್ಷ ತೇಜೂರು ಆನಂದ್, ತಾಲೂಕು ಅಧ್ಯಕ್ಷ ಮಂಜುನಾಥ್ ಮೊದಲಾದವರು ಗುರುವಾರ ದೂರು ನೀಡಿದರು.

ಯೋಜನೆಯಡಿ ಜಿಲ್ಲೆ ಮಾತ್ರವಲ್ಲದೆ ರಾಜ್ಯಾದ್ಯಂತ ನೂರಾರು ಕೋಟಿ ಅವ್ಯವಹಾರ ನಡೆದಿದ್ದು, ದೊಡ್ಡ ಹಗರಣದ ಬಗ್ಗೆ ತನಿಖೆ ನಡೆಸಿ, ಭ್ರಷ್ಟರನ್ನು ಶಿಕ್ಷಿಸಿ ಎಂದು ಮನವಿ ಮಾಡಿದರು.

ಸಕಲೇಶಪುರ ತಾಪಂ ಇಒ ಗಂಗಾಧರನ್ ಜಿ.ಡಿ., ಜಿಪಂ ಮುಖ್ಯ ಲೆಕ್ಕಾಧಿಕಾರಿ ತಫಜುಲ್ ಹುಸೇನ್, ಅರಸೀಕೆರೆ ತಾಪಂ ಇಒ ಸತೀಶ್, ಪಿಎಂಎವೈ ಸಕಲೇಶಪುರ ನೋಡೆಲ್ ಅಧಿಕಾರಿ ರಾಜೇಶ್, ಹಾಸನ ನೋಡೆಲ್ ಅಧಿಕಾರಿಗಳಾದ ಚಿದಾನಂದ, ಗುರುಮೂರ್ತಿ ಮತ್ತು ಅರಸೀಕೆರೆಯ ಪಾಲಾಕ್ಷ ಅವರ ವಿರುದ್ಧ ದೂರು ನೀಡಲಾಗಿದೆ.ಅದಕ್ಕೂ ಮೊದಲು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಗಿಲೆ ಯೋಗೇಶ್, ಪಿಎಂಎವೈ ಯೋಜನೆ, ಕೇಂದ್ರ ಶೇ.60, ರಾಜ್ಯದ ಶೇ.40 ಅನುದಾನದಲ್ಲಿ ಮನೆ ಇಲ್ಲದವರಿಗೆ ಸೂರು ನಿರ್ಮಿಸಿಕೊಡುವುದಾಗಿದೆ. ಪಿಡಿಒಗಳು ಮನೆಯಿಲ್ಲದವರನ್ನು ಗುರುತಿಸಿ ಪಟ್ಟಿ ಮಾಡುತ್ತಾರೆ. ತಾಪಮ ಇಒ ಪರಿಶೀಲಿಸಿ, ಜಿಪಂ ಯೋಜನಾಧಿಕಾ–ರಿಗೆ ಕಳಿಸುತ್ತಾರೆ. ಮುಖ್ಯ ಲೆಕ್ಕಾಧಿಕಾರಿ ಅರ್ಹರಿಗೆ ಹಣ ಬಿಡುಗಡೆ ಮಾಡುತ್ತಾರೆ ಎಂದರು. ಹೊರ ಗುತ್ತಿಗೆ ನೌಕರನೊಂದಿಗೆ ವಿವಿಧ ಅಧಿಕಾರಿಗಳು ಸೇರಿ ಭ್ರಷ್ಟಾಚಾರ ಎಸಗಿದ್ದಾರೆ. ಫಲಾನುಭವಿಗಳಲ್ಲದವರ ಖಾತೆಗೆ ಹಣ ಹಾಕಿ ನಂತರ ಬೆದರಿಸಿ ವಾಪಸ್ ಪಡೆದುಕೊಂಡಿದ್ದಾರೆ. ಯಾರೆಲ್ಲಾ ಭಾಗಿಯಾಗಿದ್ದಾರೋ ಅವರಿಗೆ ತಕ್ಕ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿದರು.

ಈ ಹಗರಣ ಕಾರಣ–ಕ್ಕೆ ಪಿಡಿಒಗಳನ್ನು ಅಮಾನತು ಮಾಡಿದರೆ ಸಾಲದು ಪಟ್ಟಿ ಪರಿಶೀಲಿಸುವ, ಹಣ ಬಿಡುಗಡೆ ಮಾಡುವ ಅಧಿಕಾರಿಗಳನ್ನೂ ದಂಡಿಸಬೇಕೆಂದು ಆಗ್ರಹಿಸಿದರು.

ಅಮಾಯಕರ ಅಕೌಂಟ್ ನಂಬರ್, ಆಧಾರ್ ಕಾರ್ಡ್ ಪಡೆದು ಹಣ ಹಾಕಿದವರನ್ನೂ ಕೂಡಲೇ ಬಂಧಿಸಬೇಕು. ಇಷ್ಟೆಲ್ಲ ಆಗಿದ್ದರೂ ಜಿಪಂ ಸಿಇಒ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು.ಹಗರಣ ನಮಗೆ ಗೊತ್ತೇ ಇಲ್ಲ, ಆದರೂ ನಮ್ಮನ್ನು ಬಲಿ ಪಶು ಮಾಡಲಾಗುತ್ತಿದೆ ಎಂದು ಪಿಡಿಒಗಳು ರಾಜ್ಯ ಸಂಘಕ್ಕೆ ದೂರು ಕೊಡುತ್ತಿದ್ದಾರೆ. ಡಿಸಿ ಅವರು ಸರ್ಕಾರದ ಗಮನಕ್ಕೆ ತರಬೇಕು. ಸಂಬಂಧಪಟ್ಟ ಸಚಿವರು, ಮೇಲಧಿಕಾರಿಗಳು ಹಗರಣದ ಬಗ್ಗೆ ಕೂಲಂಕಷ ಪರಿಶೀಲನೆ ನಡೆಸಿ ನಿಜವಾಗಿ ತಪ್ಪು ಮಾಡಿರುವವರಿಗೆ ಶಿಕ್ಷೆ ಕೊಡಿಸಬೇಕೆಂದು ಆಗ್ರಹಿಸಿದರು.

ಶೀಘ್ರ ಕ್ರಮ ಕೈಗೊಳ್ಳದೇ ಇದ್ದರೆ ಮೊದಲು ಡಿಸಿ ಕಚೇರಿ ಎದುರು ಧರಣಿ ನಡೆಸಿ ನಂತರ ಸಂಬಂಧಪಟ್ಟ ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

# ಸಾರ್ವಜನಿಕ ಆಸ್ಪತ್ರೆಯಲ್ಲಿ ಹೆರಿಗೆ ಪ್ರಮಾಣ ಕುಸಿತ

## ಶಾಸಕ ಎ. ಮಂಜು ಪ್ರಶ್ನೆ । ರಕ್ಷಾ ಸಮಿತಿ ಪ್ರಗತಿ ಪರಿಶೀಲನಾ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸಾರ್ವಜನಿಕ ಆಸ್ಪತ್ರೆಯಲ್ಲಿ ಎಲ್ಲಾ ಸೌಲಭ್ಯಗಳಿದ್ದರೂ ಹೆರಿಗೆ ಪ್ರಮಾಣ ಕುಸಿತವಾಗಲು ಕಾರಣ ಏನೆಂದು ಶಾಸಕ ಎ. ಮಂಜು ಪ್ರಶ್ನಿಸಿದರು.

ಆಸ್ಪತ್ರೆ ಸಭಾಂಗಣದಲ್ಲಿ ಬುಧವಾರ ನಡೆದ ರಕ್ಷಾ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೆಲವು ವರ್ಷಗಳ ಹಿಂದೆ ಸೌಕರ್ಯಗಳ ಕೊರತೆ ಇದ್ದರೂ ಕೂಡ ವಾರ್ಷಿಕ 800 ರಿಂದ 900 ತನಕ ಹೆರಿಗೆ ಸಾರ್ವಜನಿಕರ ಆಸ್ಪತ್ರೆಯಲ್ಲಿ ಆಗುತ್ತಿತ್ತು. ಆದರೆ ಕಳೆದ ಒಂದು ವರ್ಷದ ಅವಧಿಯ ಅಂಕಿ ಅಂಶಗಳನ್ನು ಅವಲೋಕಿಸಿದರೇ ಈ ಸಂಖ್ಯೆ ಕೇವಲ 352 ಆಗಿದೆ. ಸಾಮಾನ್ಯ ಪ್ರಕರಣಗಳನ್ನೂ ಬೇರೆ ಆಸ್ಪತ್ರೆಗೆ ಕಳುಹಿಸುತ್ತಿರುವುದು ಸರಿಯಲ್ಲ. 100 ಬೆಡ್, 25 ಐಸಿಯು ಹಾಸಿಗೆ ಆಸ್ಪತ್ರೆ ಹೊಂದಿದೆ. ಅಲ್ಲದೆ ಎಲ್ಲಾ 100 ಹಾಸಿಗೆಗಳಿಗೂ ಕೂಡ ಆಕ್ಸಿಜನ್ ಸೌಲಭ್ಯ ಕಲ್ಪಿಸಲಾಗಿದೆ. ಹೈಟೆಕ್ ಪ್ರಯೋಗಶಾಲಾ, ತಂತ್ರಜ್ಞರು ಇದ್ದಾರೆ. ತಜ್ಞ ವೈದ್ಯರು ಕೂಡ ಇದ್ದಾರೆ. ಆದರೂ ಇಷ್ಟೊಂದು ಕಡಿಮೆ ಸಂಖ್ಯೆಯ ಹೆರಿಗೆ ವರದಿ



ನನಗೆ ತೃಪ್ತಿದಾಯಕವಾಗಿಲ್ಲ. ಇದು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ, ವೈದ್ಯರು ಹಾಗು ಸಿಬ್ಬಂದಿ ನಿರ್ಲಕ್ಷ್ಯಕ್ಕೆ ಸಾಕ್ಷಿ ಎಂದು ಬೇಸರ ವ್ಯಕ್ತಪಡಿಸಿದರು.

ಸುದೀರ್ಘ ರಜೆಗೆ ಆಕ್ಷೇಪ:

ಸಾರ್ವಜನಿಕ ಆಸ್ಪತ್ರೆಯ ಮೂಳೆ ತಜ್ಞ ಡಾ. ಎಂ.ಕೆ. ಹರೀಶ್ ಅವರಿಗೆ ಖಾಸಗಿ ಆಸ್ಪತ್ರೆ ವೈದ್ಯರು ನೀಡಿರುವ ವೈದ್ಯಕೀಯ ಪ್ರಮಾಣ ಪತ್ರ ಆಧರಿಸಿ ದೀರ್ಘ ರಜೆ ನೀಡಿರುವ ಕುರಿತು ತನಿಖೆ ನಡೆಸಬೇಕೆಂದು ಶಾಸಕ ಎ. ಮಂಜು ಸೂಚಿಸಿದರು.

ರಜೆ ನೀಡಿರುವ ಆಡಳಿತ ವೈದ್ಯಾಧಿಕಾರಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿ ಕ್ರಮದ ಕುರಿತು ತನಿಖೆ ನಡೆಸಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಬೇಕೆಂದು ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎಂ.ಬಾಬುಗೆ ನಿರ್ದೇಶನ ನೀಡಿದರು.

ಕಳೆದ ಒಂದು ವರ್ಷದ ಅವಧಿಯಲ್ಲಿ ಡಾ. ಹರೀಶ್ ಅಂದಾಜು ಒಂದು ತಿಂಗಳು ಸೇವೆ ಹೊರತುಪಡಿಸಿದರೇ ಉಳಿದಂತೆ ಸಂಪೂರ್ಣವಾಗಿ ರಜೆಯಲ್ಲಿದ್ದಾರೆ. ಪ್ರತಿ ತಿಂಗಳು ಸಂಬಳ ಮಾತ್ರ ಪಡೆಯುತ್ತಾರೆ. ಸರ್ಕಾರಿ ನೌಕರ, ಅಧಿಕಾರಿಗೆ ಸೇವಾ ನಿಮಯ ಪ್ರಕಾರ ಇಂತಿಷ್ಟು ಅವಧಿಯ ರಜೆ ಪಡೆಯಲು ಅವಕಾಶವಿದೆ. ಹೆಚ್ಚುವರಿಯಾಗಿ ರಜೆ ಪಡೆಯಬೇಕಾದರೇ ಇಲಾಖೆಯ ಅನುಮತಿ ಬೇಕು. ಅಲ್ಲದೆ ಸರ್ಕಾರಿ ಆಸ್ಪತ್ರೆಯ ತಜ್ಞ ವೈದ್ಯರಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ. ಆದರೆ ಈತ ಖಾಸಗಿ ಆಸ್ಪತ್ರೆ ವರದಿ ಪಡೆದು ರಜೆ ಮಂಜೂರು ಮಾಡಿಕೊಂಡಿರುವುದು ಹೇಗೆ ಎಂದು ಗರಂ ಆದರು.

ದೀರ್ಘ ರಜೆಯಲ್ಲಿರುವ ಕಾರಣ ಜನ ಸಾಮಾನ್ಯರಿಗೆ ತುಂಬಾ ಸಮಸ್ಯೆಯಾಗಿದೆ. ಕೂಡಲೇ ಈತನನ್ನು ಬೇರೆ ಆಸ್ಪತ್ರೆಗೆ ವರ್ಗಾವಣೆ ಮಾಡಬೇಕು. ಇಲ್ಲಿನ ಆಸ್ಪತ್ರೆಗೆ ಬೇರೆ ವೈದ್ಯರನ್ನು ನೇಮಕ ಮಾಡಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸೂಚನೆ ನೀಡಿದರು.

ಸರ್ಕಾರಿ ಆಸ್ಪತ್ರೆಯಿಂದ 200 ಮೀಟರ್ ದೂರದಲ್ಲಿ ಖಾಸಗಿ ಕ್ಲಿನಿಕ್, ಆಸ್ಪತ್ರೆ ತೆರೆಯಲು ಅವಕಾಶವಿದೆ. ಅದನ್ನು ಉಲ್ಲಂಘನೆ ಮಾಡಿ ಸಾರ್ವಜನಿಕ ಆಸ್ಪತ್ರೆ ಮುಂಭಾಗದಲ್ಲಿ ಖಾಸಗಿ ಕ್ಲಿನಿಕ್, ಲ್ಯಾಬೋರೇಟರಿ ಕಾರ್ಯನಿರ್ವಹಿಸುತ್ತಿವೆ. ಈ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಬೇಕೆಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ಅವರಿಗೆ ತಿಳಿಸಿದರು.

ವೈದ್ಯರು–ಸಿಬ್ಬಂದಿ ಹಾಜರಾತಿ ಸರಿ ಇಲ್ಲ: ಆಸ್ಪತ್ರೆಯ ಎಲ್ಲಾ ವೈದ್ಯರು, ಸಿಬ್ಬಂದಿಯ ಹಾಜರಾತಿ ಸಮರ್ಪಕವಾಗಿಲ್ಲ. ಖಾಸಗಿ ಪ್ರಾಕ್ಟೀಸ್‌ನ್ನು ವೈದ್ಯರು ನಡೆಸುತ್ತಿರುವುದು ಈ ಸಮಸ್ಯೆಗೆ ಪ್ರಮುಖ ಕಾರಣವಾಗಿದೆ. ಆಸ್ಪತ್ರೆಯ ಕರ್ತವ್ಯ ವೇಳೆ ವೈದ್ಯರು ಹಾಜರಿಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಕೇವಲ ಎರಡು ತಿಂಗಳ ಅವಧಿಯ ಹಾಜರಾತಿಯನ್ನು ಗಮನಿಸಿದಾಗ ಈ ಲೋಪ ಕಂಡುಬಂದಿದೆ. ಮುಂದಿನ ಸಭೆ ವೇಳೆಗೆ ಕಳೆದ ಜನವರಿಯಿಂದ ಎಲ್ಲಾ ವೈದ್ಯರು, ಸಿಬ್ಬಂದಿ ಹಾಗು ಡಿ ಗ್ರೂಪ್ ನೌಕರರ ಹಾಜರಾತಿಯನ್ನು ಸಭೆಗೆ ಮಂಡಿಸಬೇಕು. ಈ ಬಗ್ಗೆ ರಕ್ಷಾ ಸಮಿತಿ ಸದಸ್ಯರು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಮಂಜು ಸಲಹೆ ನೀಡಿದರು.

ಸ್ಟಾಫ್ ನರ್ಸ್‌ಗಳ ಕಾರ್ಯವೈಖರಿ ಕುರಿತು ಬೇಸರ ವ್ಯಕ್ತಪಡಿಸಿದ ಅವರು, ಲಭ್ಯ ಸಿಬ್ಬಂದಿಯನ್ನು ನಿಮಾನುಸಾರ ಬಳಕೆ ಮಾಡಿಕೊಂಡು ಸೇವೆ ನೀಡಬೇಕು. ಸ್ಥಳೀಯರು, ಹೊರಗಿನವರು ಎಂಬ ಭೇದ ಮಾಡಬಾರದು ಎಂದರು.

ಸಭೆಯಲ್ಲಿ ರಕ್ಷಾ ಸಮಿತಿ ಉಪಾಧ್ಯಕ್ಷ ರಘು, ಸದಸ್ಯರಾದ ಗಣೇಶ್, ಜಬಿವುಲ್ಲಾ, ಬಾಣದಹಳ್ಳಿ ಗಣೇಶ್, ಆಶಾ ಗೋಪಾಲ್, ಆನಂದ್, ತಾಪಂ ಆಡಳಿತಾಧಿಕಾರಿ ಬಾಬು, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ, ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಸ್ವಾಮಿಗೌಡ, ಡಾ. ದೀಪಕ್, ಡಾ. ಸುನಿಲ್ ಇತರರು ಇದ್ದರು.

# ರಾಣಿ ಅಬ್ಬಕ್ಕಳ ಶೌರ್ಯ ಸ್ಮರಣೆ: ಪಂಜಿನ ಮೆರವಣಿಗೆ




ಬೇಲೂರು: ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಹಾಗೂ ದೇಶಭಕ್ತ ಬಳಗದ ಸಂಯುಕ್ತ ಆಶ್ರಯದಲ್ಲಿ ವೀರವನಿತೆ ರಾಣಿ ಅಬ್ಬಕ್ಕನವರ 500ನೇ ಜನ ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ಪಂಜಿನ ಮೆರವಣಿಗೆ ನಡೆಯಿತು.

ಪಟ್ಟಣದ ಬಸವೇಶ್ವರ ವೃತ್ತದಿಂದ ಪ್ರಾರಂಭವಾದ ರಥಯಾತ್ರೆ, ವಿದ್ಯಾರ್ಥಿಗಳ ದೇಶಭಕ್ತಿ ಘೋಷಣೆಗಳೊಂದಿಗೆ ಸಾಗಿತು. ಅಲಂಕರಿಸಲ್ಪಟ್ಟ ರಥದಲ್ಲಿ ರಾಣಿ ಅಬ್ಬಕ್ಕನವರ ಪ್ರತಿಮೆ ಮೆರೆಯುತ್ತಿದ್ದು, ಪಟ್ಟಣದ ಜನರು ಭಕ್ತಿಭಾವದಿಂದ ಕಣ್ತುಂಬಿಕೊಂಡರು.

ದೇಶಭಕ್ತ ಬಳಗದ ಅಧ್ಯಕ್ಷ ಡಾ. ಸಂತೋಷ್ ಮಾತನಾಡಿ, ರಾಣಿ ಅಬ್ಬಕ್ಕನು ಕೇವಲ ಕರ್ನಾಟಕದ ಹೆಮ್ಮೆ ಮಾತ್ರವಲ್ಲ, ಭಾರತದ ಮೊದಲ ಸ್ವಾತಂತ್ರ್ಯ ಹೋರಾಟದ ಶೂರ ನಾರಿ. ಪೋರ್ಚುಗೀಸರ ವಿರುದ್ಧ ಧೈರ್ಯವಾಗಿ ಹೋರಾಡಿ ದೇಶ ಪ್ರೇಮ ಮೆರೆದು ಮಾದರಿಯಾಗಿದ್ದಾರೆ. ಅವರ 500ನೇ ಜನದಿನಾಚರಣೆಯ ಅಂಗವಾಗಿ ನಾವು ಪಂಜಿನ ಮೆರವಣಿಗೆ ಹಾಗೂ ರಥಯಾತ್ರೆಯ ಮೂಲಕ ಅವರ ಶೌರ್ಯವನ್ನು ಜನತೆಗೆ ನೆನಪಿಸುತ್ತಿದ್ದೇವೆ ಎಂದರು.

ಮಾರ್ಗಮಧ್ಯೆ ವಿದ್ಯಾರ್ಥಿಗಳು ಹಾಗೂ ಸ್ಥಳೀಯ ಸಂಘಟನೆಗಳು ಹೂವಿನ ಹಾರಗಳಿಂದ ರಥಯಾತ್ರೆಗೆ ಸ್ವಾಗತ ಕೋರಿದರು.

ದೇಶಭಕ್ತ ಬಳಗದ ಮಹೇಶ್, ವೀರಭದ್ರಪ್ಪ, ಎಬಿವಿಪಿಯ ಆಶಾ ಕಿರಣ್, ಕೇಶವ, ಕಿರಣ್, ದೇವರಾಜ್, ಮಂಜುನಾಥ, ಸುಶಿತ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್ 12

1490 ಬಿಸಿಇ: ಗ್ರೀಕ್–ಪರ್ಷಿಯನ್ ಯುದ್ಧ, ಪ್ರಸಿದ್ಧ ಮ್ಯಾರಥಾನ್ ಸಮರ ಆರಂಭವಾಯಿತು.
1609: ಇಂಗ್ಲಿಷ್ ಅನ್ವೇಷಕ ಹೆನ್ರಿ ಹಡ್ಸನ್ ನದಿಯನ್ನು ಕಂಡುಹಿಡಿದರು.
1683: ವಿಯೆನ್ನಾ ಸಮರದಲ್ಲಿ ಒಟ್ಟೋಮನ್ ಸಾಮ್ರಾಜ್ಯ ಸೋಲು ಕಂಡಿತು. ಇದು ಯೂರೋಪಿನ ಇತಿಹಾಸದ ತಿರುವುಬಿಂದು.
1919: ಹಿಟ್ಲರ್ ಮೊದಲ ಬಾರಿ ಜರ್ಮನ್ ವರ್ಕರ್ಸ್ ಪಾರ್ಟಿ ಸಭೆಯಲ್ಲಿ ಭಾಷಣ ಮಾಡಿದ ದಿನ
1940: ಫ್ರಾನ್ಸ್‌ನಲ್ಲಿ ಪ್ರಸಿದ್ಧ ಲ್ಯಾಸ್ಕೊ ಗುಹಾ ಚಿತ್ರಗಳು ಪತ್ತೆಯಾದವು.
1953: ಜಾನ್ ಕೆನ್ನಡಿ ಅವರು ಜಾಕ್ವೆಲಿನ್ ಬೂವಿಯರ್ ಅವರನ್ನು ವಿವಾಹವಾದರು.
1959: ಸೋವಿಯತ್ ಯೂನಿಯನ್‌ನ ಲುನಾ–2 ಉಪಗ್ರಹವು ಚಂದ್ರನ ಮೇಲ್ಮೈ ತಲುಪಿದ ಮೊದಲ ಮಾನವ ನಿರ್ಮಿತ ವಸ್ತುವಾಯಿತು.
1974: ಹೈಬ್ರಿಡ್ ಕಾರು ತಯಾರಿಕೆಯ ಪ್ರಯೋಗಕ್ಕಾಗಿ 'ಕುವಾಂಗ್' ವಾಹನವನ್ನು ಪರಿಚಯಿಸಲಾಯಿತು.
2003: ಇಂಡೋನೇಷ್ಯಾದ ಜಕಾರ್ತಾದ ಮರಿಯೊಟ್ ಹೋಟೆಲ್‌ನಲ್ಲಿ ಭಯೋತ್ಪಾದಕ ಬಾಂಬ್ ಸ್ಫೋಟ.

### ಜನನ

1913: ಜೆಸ್ಸಿಓವೆನ್ಸ್, ಅಮೆರಿಕಾದ ಪ್ರಸಿದ್ಧ ಅಥ್ಲೀಟ್
1944: ಬ್ಯಾರಿ ವೈಟ್, ಅಮೆರಿಕಾದ ಗಾಯಕ
1966: ಮೈಕೆಲ್ ಜಾನ್ಸನ್, ಒಲಿಂಪಿಕ್ ಚಿನ್ನದ ಪದಕ ವಿಜೇತ ಅಥ್ಲೀಟ್

### ಮರಣ

1992: ಆಂಟೋನಿ ಪರ್ಕಿನ್ಸ್, ಹಾಲಿವುಡ್ ನಟ
2003: ಜಾನಿ ಕಾಶ್, ಅಮೆರಿಕಾದ ಪ್ರಸಿದ್ಧ ಗಾಯಕ

# ಎನ್‌ಆರ್‌ಐ ಕೋಟಾ ರದ್ದುಪಡಿಸಲು ಎಐಡಿಎಸ್‌ಒ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ನಾಟಕದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ರದ್ದುಪಡಿಸಲು ಕೋರಿ ಎಐಡಿಎಸ್‌ಒ ನೇತೃತ್ವದಲ್ಲಿ ಹೇಮಾವತಿ ಪ್ರತಿಮೆ ಮುಂಭಾಗ ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆದಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಎಐಡಿಎಸ್‌ಒ ಜಿಲ್ಲಾ ಸಂಚಾಲಕಿ ಚೈತ್ರ, ರಾಜ್ಯ ಸರ್ಕಾರವು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರತಿ ಸೀಟಿಗೆ 25 ಲಕ್ಷ ರೂ. ದುಬಾರಿ ಶುಲ್ಕದೊಂದಿಗೆ ಶೇ.15 ರಷ್ಟು ಎನ್‌ಆರ್‌ಐ ಕೋಟಾ ರಂಭಿಸಲು ನಿರ್ಧರಿಸಿದೆ. ಈ ಕ್ರಮದಿಂದ ವೈದ್ಯಕೀಯ ಕಾಲೇಜುಗಳಿಗೆ ಹಣ ಹರಿದು ಬರಲಿದೆ ಎಂದು ಸರ್ಕಾರ ಹೇಳಿಕೊಂಡಿದ್ದರೂ, ವಾಸ್ತವದಲ್ಲಿ ಈ ವಿಧಾನವು ಬಡ–ಮಧ್ಯಮವರ್ಗದ ವಿದ್ಯಾರ್ಥಿಗಳ ಪಾಲಿಗೆ ಅಮೂಲ್ಯವಾದ ಸರ್ಕಾರಿ ಸೀಟುಗಳನ್ನು ಶ್ರೀಮಂತರಿಗೆ ಹರಾಜು




ಹಾಕುವ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣದತ್ತ ತಳ್ಳುವ ಪ್ರಯತ್ನವಾಗಿದೆ ಎಂದು ದೂರಿದರು.

ವೈದ್ಯರಾಗಿ ಸಮಾಜಕ್ಕೆ ಸೇವೆ ಸಲ್ಲಿಸಲು ಬಯಸುವ ನೂರಾರು ಶ್ರಮಜೀವಿ, ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶದ ಬಾಗಿಲು ಮುಚ್ಚುತ್ತಿದೆ.

ಈಗಾಗಲೇ ಕರ್ನಾಟಕದ ಸರ್ಕಾರಿ, ವೈದ್ಯಕೀಯ ಕಾಲೇಜುಗಳ ಶುಲ್ಕ ದೇಶದಲ್ಲಿಯೇ ಅತಿ ಹೆಚ್ಚಿದ್ದು, ಈ ಅನ್ಯಾಯದ ಹೊರೆಯನ್ನು ಕಡಿಮೆ ಮಾಡುವ ಬದಲು, ಸರ್ಕಾರವು ವಿದ್ಯಾರ್ಥಿಗಳಿಂದ ಇನ್ನಷ್ಟು ಹಣವನ್ನು ವಸೂಲಿ ಮಾಡಲು ನಿರ್ಲಜ್ಜವಾಗಿ ಪ್ರಯತ್ನಿಸುತ್ತಿದೆ. ವೈದ್ಯಕೀಯ ಕಾಲೇಜುಗಳನ್ನು ಬಲಪಡಿಸಲು ರಾಜ್ಯದ ಬೊಕ್ಕಸದಿಂದ ಅವಶ್ಯಕ ಹಣವನ್ನು ಮಂಜೂರು ಮಾಡುವ ಬದಲು, ಸರ್ಕಾರವು ನಾಚಿಕೆಯಿಲ್ಲದೆ ಈ ಹೊರೆಯನ್ನು ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳ ಮೇಲೆ ವರ್ಗಾಯಿಸುತ್ತಿದೆ ಎಂದು ಕಿಡಿ ಕಾರಿದರು. ಕರ್ನಾಟಕ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 12,447 ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿ ಮತ್ತು ಮೂಲ ಸೌಕರ್ಯವನ್ನು ಖಾತ್ರಿಪಡಿಸಲು ಆದ್ಯತೆ ನೀಡಬೇಕಿರುವುದು ಅತ್ಯಗತ್ಯವಾಗಿದೆ. ಈ ಕೂಡಲೇ ರಾಜ್ಯ ಸರ್ಕಾರದ ವಿದ್ಯಾರ್ಥಿ ವಿರೋಧಿ ಮತ್ತು ಜನವಿರೋಧಿ ಕ್ರಮ ಹಿಂಪಡೆಯಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯಕರ್ತರಾದ ಸುಷ್ಮಾ, ತಿಲಕ್ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾಲ ವಸೂಲಿಗೆ ಭೂಮಿ ಹರಾಜು: ರೈತ ಸಂಘ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬ್ಯಾಂಕ್‌ನವರು ರೈತರ ಕೃಷಿ ಸಾಲ ವಸೂಲಾತಿಗೆ ಜಮೀನನ್ನು ಹರಾಜು ಮಾಡುವುದನ್ನು ತಡೆಯಬೇಕು ಹಾಗೂ ಜಮೀನು ಉಳಿಸುವಂತೆ ಆಗ್ರಹಿಸಿ ನಗರದ ಕೆ.ಆರ್. ಪುರಂನಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕ್ ಮುಂದೆ ರಸ್ತೆ ಮಧ್ಯೆ ಟೆಂಟ್ ಹಾಕಿ, ಸ್ಥಳದಲ್ಲಿಯೇ ಮಧ್ಯಾಹ್ನದ ಊಟ ತಯಾರಿಸಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಸಾಮೂಹಿಕ ನಾಯಕತ್ವ ಜಿಲ್ಲಾ ಘಟಕದ ರಾಜ್ಯ ವರಿಷ್ಠ ಕೆ.ಟಿ. ಗಂಗಾಧರ್, ರೈತರು ಬೆಳೆ ಬೆಳೆಯಲು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಡೆದು ಸಾಲ ತೀರುವಳಿ ಮಾಡದೆ ಸುಸ್ತಿದಾರರಾಗಿರುವ ರೈತರ ಸಾಲವನ್ನು ಏಕಗಂಟು ಸಾಲ ತೀರುವಳಿ ಮೂಲಕ ತೀರುವಳಿ ಮಾಡಲಾಗುತ್ತಿದೆ.

ಆದರೆ ಕಾವೇರಿ ಗ್ರಾಮೀಣ ಬ್ಯಾಂಕ್‌ನವರು ಮಾಡುತ್ತಿಲ್ಲ. ಆದ್ದರಿಂದ ಕೂಡಲೇ ಏಕಗಂಟು ಮುಖಾಂತರ ತೀರುವಳಿ ಮಾಡಿಕೊಂಡು ರಿಯಾಯಿತಿ ಕೊಡಬೇಕು ಎಂದು ಆಗ್ರಹಿಸಿದರು.

ಬ್ಯಾಂಕ್‌ನವರು ಲಾಯರ್ ಮತ್ತು ಕೋರ್ಟ್ ಮೂಲಕ ರೈತರಿಗೆ ನೋಟಿಸ್ ನೀಡುತ್ತಿದ್ದು, ಇ–ಹರಾಜು ಹಾಕುತ್ತೇವೆ ಎಂದು ಭಯದ ವಾತಾವರಣ ಸೃಷ್ಟಿ ಮಾಡಿದ್ದಾರೆ. ಇದು ಕೂಡಲೇ ರದ್ದಾಗಬೇಕು ಎಂದು ಒತ್ತಾಯಿಸಿದರು.

ಸಾಲ ಪಡೆದ ರೈತರು, ಬೆಳೆ ನಷ್ಟ ಅಥವಾ ಆಕಸ್ಮಿಕವಾಗಿ ಮರಣ ಹೊಂದಿದರೆ ಸಾಲ ಮನ್ನ ಆಗಬೇಕು. ಬ್ಯಾಂಕ್‌ನವರು ವಿನಾಕಾರಣ ತೊಂದರೆ ನೀಡಬಾರದು, ಅಲೆಸಬಾರದು.

ಪ್ರತಿ ಮೂರು ತಿಂಗಳಿಗೊಮ್ಮೆ ಬಳ್ಳಾರಿ ಮುಖ್ಯ ಕಚೇರಿಯವರು ರೈತರನ್ನು ಅಲೆಸದೆ ಅವರೇ ಇಲ್ಲಿಗೆ ಬಂದು ರೈತರ ಅಹವಾಲು ಕೇಳಿ ತಕ್ಷಣ ಬಗೆಹರಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು. ಮುಖ್ಯ ಅಧಿಕಾರಿ ಬರುವುದನ್ನು ಬ್ಯಾಂಕ್‌ನ ಎಲ್ಲ ಶಾಖೆಯವರು ರೈತರಿಗೆ ಮಾಹಿತಿ ನೀಡಬೇಕು. ಸರ್ಕಾರದಿಂದ ಬರುವ ವೃದ್ಧಾಪ್ಯ ವೇತನ, ಹಾಲಿನ ಹಣ, ಪಿಎಂ ಸಮ್ಮಾನ್ ಕಿಸಾನ್ ಯೋಜನೆ ಕಂತನ್ನು ಬ್ಯಾಂಕ್‌ನವರು ಜಮಾ ಮಾಡಿಕೊಳ್ಳಬಾರದು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾ ವರಿಷ್ಠ ಕಣಗಾಲ್ ಮೂರ್ತಿ, ರಾಜ್ಯ ಅಧ್ಯಕ್ಷೀಯ ಮಂಡಳಿಯ ಸದಸ್ಯ ಗ್ಯಾರಂಟಿ ರಾಮಣ್ಣ, ಮರ್ಕಲಿ ಪ್ರಕಾಶ್, ಮಂಜು ಬಿಟ್ಟಗೌಡನಹಳ್ಳಿ,

ಅರಕಲಗೂಡು ತಾಲೂಕಿನ ಭುವನೇಶ್, ಬೇಲೂರು ತಾಲೂಕಿನ ಭೋಗ ಮಲ್ಲೇಶ್, ಕುಮಾರಸ್ವಾಮಿ ಇದ್ದರು.

# ಪೌಷ್ಟಿಕ ಆಹಾರ ಸೇವನೆ ಆದ್ಯತೆಯಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪೌಷ್ಟಿಕ ಆಹಾರ ಸೇವನೆ ಕೇವಲ ಮಹಿಳೆಯರಿಗೆ, ಮಕ್ಕಳಿಗೆ ಮಾತ್ರವಲ್ಲದೆ ಎಲ್ಲರಿಗೂ ದಿನಗಳಲ್ಲಿ ಅಗತ್ಯವಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಮಳಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಲೇಬೇಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಮಳಲಿ ಗ್ರಾಮದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಪೌಷ್ಟಿಕ ಆಹಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಒತ್ತಡದ ಬದುಕಿನಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಹೀಗಾಗಿ ಪ್ರತಿಯೊಬ್ಬರೂ ದಿನನಿತ್ಯ ಪೌಷ್ಟಿಕ ಆಹಾರ ಸೇವನೆಯ ಮೂಲಕ ಆರೋಗ್ಯದ ಕಾಳಜಿ ವಹಿಸಬೇಕು. ಪೌಷ್ಟಿಕ ಆಹಾರ ಎಂದರೆ ದೇಹಕ್ಕೆ ಅಗತ್ಯವಿರುವ ಹಣ್ಣು, ತರಕಾರಿ, ಮೊಟ್ಟೆ, ಬೇಳೆ, ಕಾಳು, ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಅಗತ್ಯಕ್ಕೆ ತಕ್ಕಂತೆ ಸೇವಿಸುವುದಾಗಿದೆ. ಪೌಷ್ಟಿಕ ಆಹಾರದಿಂದ ಉತ್ತಮ ದೈಹಿಕ



ಆರೋಗ್ಯ ಮಾತ್ರವಲ್ಲ, ಉತ್ತಮ ಮಾನಸಿಕ ಆರೋಗ್ಯವೂ ದೊರೆಯುತ್ತದೆ ಎಂದರು.

ಇಂದು ಅಂಗನವಾಡಿ ಕೇಂದ್ರಗಳ ಮುಖಾಂತರ ಸರ್ಕಾರ ಗರ್ಭಿಣಿಯರಿಗೆ ಹಾಗೂ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುತ್ತಿದೆ. ಅದನ್ನು ಪ್ರತಿಯೊಬ್ಬರೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕರು ಹೇಳಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಮಹೇಶ್ ಮಾತನಾಡಿ, ಗರ್ಭಿಣಿ, ಬಾಣಂತಿಯರು, ಕಿಶೋರಿಯರಿಗೆ ರಕ್ತಹೀನತೆ ಸಾಮಾನ್ಯವಾಗಿದೆ. ಈ ಸಮಸ್ಯೆಯಿಂದ ಹೊರಬರಲು ಪೌಷ್ಠಿಕ ಆಹಾರ ಸೇವನೆ ಅತ್ಯಗತ್ಯ. ಹೀಗಾಗಿ ಸಾರ್ವಜನಿಕರಿಗೆ ಪೌಷ್ಟಿಕ ಆಹಾರದ ಕುರಿತು ಅರಿವು ಮೂಡಿಸಲು ನಮ ಇಲಾಖೆ ರಾಷ್ಟ್ರೀಯ ಪೌಷ್ಟಿಕ ಆಹಾರ ಕಾರ್ಯಕ್ರಮ ಆಯೋಜಿಸುತ್ತಿದೆ ಎಂದರು.

ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಲಕ್ಷ್ಮಿ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ. ರಮೇಶ್, ಗ್ರಾ.ಪಂ.ಸದಸ್ಯ ಯೋಗೇಶ್, ಆರೋಗ್ಯ ಸುರಕ್ಷಾಧಿಕಾರಿ ಮಮತಾಜ್, ಆಶಾ ಕಾರ್ಯಕರ್ತೆಯರಾದ ಪಾರ್ವತಿ ಹಾಗೂ ತಂಡ, ಬಿಜೆಪಿ ಮುಖಂಡ ಲೋಹಿತ್ ಕೌಡಹಳ್ಳಿ, ಪಿಡಿಓ ರಂಗಸ್ವಾಮಿ, ರೇಣುಕಾ ಪ್ರಸಾದ್ ಮತ್ತಿತರರು ಹಾಜರಿದ್ದರು.

# ವಿದ್ಯಾರ್ಥಿಗಳು ಮೊಬೈಲ್ ವ್ಯಸನದಿಂದ ಹೊರ ಬರಬೇಕು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ವಿದ್ಯಾರ್ಥಿಗಳು ಮೊಬೈಲ್ ಗೀಳಿನಿಂದ ಹೊರ ಬಂದು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಪಟ್ಟಣದ ಮಿನಿ ಕ್ರೀಡಾಂಗಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಶಿಕ್ಷಣ ಇಲಾಖೆ ಹಾಗೂ ರಾಯರಕೊಪ್ಪಲು ವತಿಯಿಂದ ಹಮಿಕೊಂಡಿದ್ದ ತಾಲ್ಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಅವಶ್ಯಕ್ಕೆ ತಕ್ಕಂತೆ ಮಾತ್ರ ಮೊಬೈಲ್ ಉಪಯೋಗಿಸಬೇಕು. ದಿನದಲ್ಲಿ ಒಂದು ಗಂಟೆಯಾದರೂ ಕ್ರೀಡೆಯಲ್ಲಿ ಭಾಗವಹಿಸಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು. ಕ್ರೀಡೆಯಲ್ಲಿ ಭಾಗವಹಿಸುವ ಪ್ರತಿ ಮಕ್ಕಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ಗೆಲ್ಲುವ ಗುರಿ ಹೊಂದಬೇಕು. ಮುಂದಿನ ದಿನಗಳಲ್ಲಿ ಕ್ರೀಡಾಂಗಣಕ್ಕೆ ಮೂಲಭೂತ ಸೌಕರ್ಯ ನೀಡಲು ಗುರಿ ಹೊಂದಿದ್ದೇನೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಜಿ. ಕೃಷ್ಣೇಗೌಡ ಮಾತನಾಡಿ, ಯಾವುದೆ ಕ್ರೀಡೆಯಲ್ಲಿ ಸಾಧನೆ ಮಾಡಲು ಗುಣಮಟ್ಟದ ತರಬೇತಿ ಪಡೆಯುವದು ಅಗತ್ಯ. ಕ್ರೀಡೆಯಲ್ಲಿ ಸಾಧನೆ ಮಾಡುವ ಆಟಗಾರರಿಗೆ ಸದಾ ಪ್ರೋತ್ಸಾಹ ನೀಡುತ್ತೇವೆ. ಕ್ರೀಡೆಗಳಲ್ಲಿ ನಿರ್ಣಾಯಕರ ನಿರ್ಣಯವನ್ನು ಎಲ್ಲರೂ ಗೌರವಿಸಿ ಕ್ರೀಡಾಕೂಟವನ್ನು ಯಶಸ್ವಿ ಗೊಳಿಸಬೇಕೆಂದು ತಿಳಿಸಿದರು.

# ಅಪಘಾತದಲ್ಲಿ ಗಾಯಗೊಂಡಿದ್ದ ಯುವಕ ಸಾವು

ಹೊಳೆನರಸೀಪುರ: ಗೂಡ್ಸ್ ವಾಹನ ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದ ಯುವಕ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಉಲಿವಾಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಗಣೇಶ (28) ಮೃತರು. ಸೆ. 1 ರಂದು ಕಾರ್ಯನಿಮಿತ್ತ ಹೇಮಾವತಿ ಸಕ್ಕರೆ ಕಾರ್ಖಾನೆಗೆ ಹೋಗುತ್ತಿದ್ದಾಗ ಗನ್ನಿಕಡದ ಹಳೆಯ ಸೇತುವೆ ಮೇಲೆ ಎದುರುಗಡೆಯಿಂದ ವೇಗವಾಗಿ ಬಂದ ಗೂಡ್ಸ್ ವಾಹನ ಡಿಕ್ಕಿಯಾಗಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಗಣೇಶ್‌ನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಬುಧವಾರ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೈಚನಹಳ್ಳಿಯಲ್ಲಿ ಕುಫ್ರಿ ಕರಣ್ ತಳಿ ಬೆಳೆ ಕ್ಷೇತ್ರೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಬೈಚನಹಳ್ಳಿ ಗ್ರಾಮದ ರೈತ ದಯಾನಂದ್ ಅವರು ಬೆಳೆದಿರುವ ಕುಫ್ರಿ ಕರಣ್ ತಳಿ ಬೆಳೆ ತಾಕಿನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಬೆಳೆ ಕ್ಷೇತ್ರೋತ್ಸವ ಮತ್ತು ಸಮಗ್ರ ಬೆಳೆ ನಿರ್ವಹಣೆ ಕುರಿತ ರೈತರ ತರಬೇತಿ ಕಾರ್ಯಕ್ರಮ ನಡೆಯಿತು.

ತಾಲ್ಲೂಕು ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ರಾಜೇಶ್ ಅವರ ನೇತೃತ್ವದಲ್ಲಿ ನಡೆದ ಬೆಳೆ ಕ್ಷೇತ್ರೋತ್ಸವದಲ್ಲಿ ತಾಲ್ಲೂಕು ಸೇರಿದಂತೆ ಜಿಲ್ಲೆಯಿಂದ ಹತ್ತಾರು ರೈತರು ಭಾಗವಹಿಸಿ ನೂತನ ಕುಫ್ರಿ ಕರಣ್ ಆಲೂ ತಳಿ ಬಗ್ಗೆ ಮಾಹಿತಿ ಪಡೆದುಕೊಂಡರು. ಅಲ್ಲದೆ ನೂತನ ತಳಿಯನ್ನು ಬೇಸಿಗೆ ಹಂಗಾಮಿನಲ್ಲಿ ಕೈಗೊಳ್ಳುವ ಕುರಿತು ತೋಟಗಾರಿಕೆ ಅಧಿಕಾರಿಗಳಲ್ಲಿ ಹೆಸರು ನೊಂದಾಯಿಸಿಕೊಂಡರು.

ತೋಟಗಾರಿಕೆ ಅಧಿಕಾರಿ ರಾಜೇಶ್ ಅವರು ರೈತರಿಗೆ ಮಾಹಿತಿ ನೀಡಿ, ಕೇಂದ್ರೀಯ ಆಲೂಗೆಡ್ಡೆ ಸಂಶೋಧನಾ ಕೇಂದ್ರ ಅಭಿವೃದ್ಧಿ ಪಡಿಸಿರುವ ಕುಫ್ರಿ ಕರಣ್ ತಳಿ ಅಧಿಕ ಪ್ರಮಾಣದ ರೋಗ ನಿರೋಧಕ ಶಕ್ತಿ ಹೊಂದಿದ್ದು ಉತ್ತಮ ಇಳುವರಿ ಸಿಗುವ ಆಶಾಭಾವನೆಯನ್ನು ರೈತರಲ್ಲಿ ಮೂಡಿಸಿದೆ.

ತಾಲ್ಲೂಕಿನ ಕಸಬಾ ಹೋಬಳಿಯ ಹುಲ್ಲಂಗಾಲ ಮತ್ತು ಬೈಚನಹಳ್ಳಿ ಗ್ರಾಮದ ರೈತರು, ನೂತನ ತಳಿಯಾದ ಕುಫ್ರಿ ಕರಣ್ ತಳಿ ಬೆಳೆದು ಯಶ ಕಂಡಿದ್ದಾರೆ. ಈ ತಳಿಯ ಬೆಳೆ




ರೋಗಮುಕ್ತವಾಗಿ ಹುಲುಸಾಗಿ ಬೆಳವಣಿಗೆ ಕಂಡಿರುವುದು ರೈತರ ಸಂತಸಕ್ಕೆ ಕಾರಣವಾಗಿದೆ. ಇಂದು ನೀವು ಬೆಳೆ ವೀಕ್ಷಣೆ ಮಾಡಿದ ವೇಳೆ ನೂತನ ತಳಿ ಮತ್ತು ಹಳೆಯ ಆಲೂಗಡ್ಡೆ ಬೆಳೆಯನ್ನು ಒಂದೇ ಜಮೀನಿನಲ್ಲಿ ಕೈಗೊಂಡಿರುವುದನ್ನು ಗಮನಿಸಿದ್ದೀರಿ. ನೂತನ ತಳಿಯ ಬೆಳೆ ಇನ್ನೂ ಹಸಿರಾಗಿದೆ.ಆದರೆ ಹಳೆ ಆಲೂಗಿಡ ಸಂಪೂರ್ಣವಾಗಿ ಒಣಗಿದೆ.ಇದರ ಪಕ್ಕದಲ್ಲಿಯೇ ಇರುವ ನೂತನ ಕುಫ್ರಿ ಕರಣ್ ತಳಿಗೆ ಯಾವುದೇ ರೋಗ ಬಂದಿಲ್ಲ.ಪಕ್ಕದಲ್ಲಿಯೇ ಇರುವ ಬೆಳೆ ಒಣಗಿದೆ.ನೂತನ ತಳಿಯನ್ನು ರೈತರು ಕೈಗೊಂಡು ಆರ್ಥಿಕವಾಗಿ ಮುಂದೆ ಬರಬೇಕೆಂದು ಮನವಿ ಮಾಡಿದರು.

ಆಲೂ ಬೆಳೆಗಾರ ದಯಾನಂದ್ ಮಾತನಾಡಿ, ಕಳೆದ ವರ್ಷ ಕುಫ್ರಿ ಕರಣ್ ತಳಿಯನ್ನು ಭೂಮಿಯಲ್ಲಿ ಬೆಳೆದಿದ್ದೆ. ಹೆಚ್ಚು ಇಳುವರಿ ಬಂದಿತು.ಸಣ್ಣ ಗೆಡ್ಡೆಗಳನ್ನು ನಾನು ಮಾರಾಟ ಮಾಡದೇ ಸ್ಟೋರೇಜ್‌ನಲ್ಲಿಟ್ಟು ಈ ಭಾರಿ ಅದನ್ನೆ ಬಿತ್ತನೆ ಬೀಜವಾಗಿ ಮಾಡಿಕೊಂಡಿರುವೆ.

ಒಂದು ಗಿಡದಲ್ಲಿ 10ಕ್ಕೂ ಹೆಚ್ಚು ಗಡ್ಡೆಗಳು ಇವೆ. ಕಡಿಮೆ ಬೆಲೆಗೆ ಸಣ್ಣ ಗೆಡ್ಡೆಗಳು ಮಾರಾಟವಾಗುವುದರಿಂದ ನಾವೆ ಅವುಗಳನ್ನು ಇಟ್ಟುಕೊಂಡು ಮುಂದಿನ ಬಿತ್ತನೆಗೆ ಬಳಕೆ ಮಾಡಿಕೊಳ್ಳಬಹುದಾಗಿದೆ. ಅಲ್ಲದೆ ರೋಗ ನಿರೋಧಕದಿಂದ ಹೊಸದಾಗಿ ಅಭಿವೃದ್ಧಿಗೊಳಿಸಿರುವ ಕುಫ್ರಿ ಕರಣ್ ಆಲೂ ತಳಿಯನ್ನು ಕಳೆದ ಸಾಲಿನಲ್ಲಿ ಬೈಚನಹಳ್ಳಿ ಗ್ರಾಮದ ಕುಡಿಕಾಂಡ ಸಸಿಗಳಿಂದ ಬಿಜೋತ್ಪಾದನೆ ಮಾಡಿ, ಕಳೆದ ಸಾಲಿನಲ್ಲಿ ಉತ್ಪಾದನೆಯಾದ ಬೀಜವನ್ನು ಶೀತಲ ಗ್ರಹದಲ್ಲಿ ಸಂಗ್ರಹಣೆ ಮಾಡಿ, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಬೆಳೆದಿದ್ದು, ಬೆಳೆಯು ಜ್ಯೋತಿ ಮತ್ತು ಹಿಮಾಲಿನಿ ತಳಿಗಳಿಗಿಂತಲೂ ಉತ್ತಮವಾಗಿ ಬೆಳವಣಿಗೆ ಹೊಂದಿದೆ.ಇದನ್ನು ರೈತರು ಕೈಗೊಳ್ಳಬಹುದಾಗಿದೆ ಎಂದು ಹೇಳಿದರು.

ಸಿರಿ ಸಂವೃದ್ಧಿ ಸಂಸ್ಥೆ ಮೇಲ್ವಿಚಾರ ರವೀಂದ್ರ ರೆಡ್ಡಿ, ಸುಹಾಸ್ ಆಲೂಗಡ್ಡೆ ಬೆಳೆ, ಸಂಗ್ರಹಣೆ, ದಾಸ್ತಾನು ಕುರಿತು ರೈತರೊಂದಿಗೆ ಸಂವಾದ ನಡೆಸಿದರು.

ಹಿರಿಯ ರೈತರಾದ ಹುಲ್ಲಂಗಾಲ ಸುಬ್ಬೇಗೌಡ, ಶ್ರೀನಿವಾಸ್, ಕುಮಾರ್, ನಾಗರಾಜಶೆಟ್ಟಿ, ಲಕ್ಕೆಗೌಡ, ಪಾಪಣ್ಣ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248